# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 26|12|2021

# ಪುನರ್ವಸತಿ ಕೇಂದ್ರವಾಗಿ ವಿಧಾನ ಪರಿಷತ್ ಪರಿವರ್ತನೆ



ಬಸವರಾಜ ಹೊರಟ್ಟಿ ಅವರನ್ನು ಚಿತ್ರದುರ್ಗದ ಮುರುಘಾ ಮಠದಲ್ಲಿ ಶಿವಮೂರ್ತಿ ಮುರುಘಾ ಶರಣರು ಸನ್ಮಾನಿಸಿದರು.

ಚಿತ್ರದುರ್ಗ: ಚಿಂತಕರ ಚಾವಡಿಯೆಂಬ ಹೆಗ್ಗಳಿಕೆ ಹೊಂದಿದ್ದ ವಿಧಾನಪರಿಷತ್ ಇತ್ತೀಚೆಗೆ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ಸೋಲು ಕಂಡವರ ಪುನರ್ವಸತಿ ಕೇಂದ್ರವಾಗಿ ಪರಿವರ್ತನೆಯಾಗಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಮುರುಘಾ ಮಠದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿ, ಸಾಹಿತಿ, ಕಲಾವಿದರು, ಪತ್ರಕರ್ತರಿಂದ ಕೂಡಿರುತ್ತಿದ್ದ ಹಿರಿಯರ ಸದನ ಕಲುಷಿತವಾಗುತ್ತಿದೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದವರು, ಸಚಿವರಾಗುವ ಅಪೇಕ್ಷೆ ಹೊಂದಿದವರು ಪರಿಷತ್ತಿಗೆ ಆಯ್ಕೆಯಾಗುತ್ತಿದ್ದಾರೆ. ರಾಜಕೀಯ ಪುಡಾರಿಗಳು, ನಾಯಕರ ಹಿಂಬಾಲಕರನ್ನು ವಿಧಾನಪರಿಷತ್ತಿಗೆ ತರುವುದು ಸರಿಯಲ್ಲ. ದೇಗುಲ ಸಮಾನವಾದ ಪರಿಷತ್ ಅಪವಿತ್ರ ಆಗಬಾರದು. ವಿಧಾನ ಪರಿಷತ್ತಿನಲ್ಲಿ ಡಿ.15ರಂದು ನಡೆದ ಘಟನೆ ಕಪ್ಪುಚುಕ್ಕೆಯಾಗಿ ಉಳಿದಿದೆ. ವಿಧಾನ ಪರಿಷತ್ ರದ್ದು ಮಾಡುವ ಕೂಗು ಕೇಳಿ ಬೇಸರವಾಗಿದೆ. 41 ವರ್ಷಗಳಿಂದ ಪರಿಷತ್ತಿನಲ್ಲಿರುವ ಕಾರಣಕ್ಕೆ ನೋವಾಗಿದೆ. ಈ ಘಟನೆಗೆ ಪರಿಷತ್ತಿನ ಎಲ್ಲ ಸದಸ್ಯರು ಜವಾಬ್ದಾರರು. ರಾಜಕಾರಣದಲ್ಲಿ ನ್ಯಾಯ, ನೀತಿ, ಧರ್ಮ ಕಡಿಮೆಯಾಗುತ್ತದೆ' ಎಂದರು.

ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕೆ ಸಂಘವೊಂದನ್ನು ಸ್ಥಾಪಿಸಿದಾಗ ಶಿಕ್ಷಕರ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಸದಸ್ಯರ ವರ್ತನೆ ರಾಜಕೀಯಕ್ಕೆ ಕರೆತಂದಿತು. ಆಕಸ್ಮಿಕವಾಗಿ ರಾಜಕೀಯ ಪ್ರವೇಶಿಸಿ 31ನೇ ವಯಸ್ಸಿಗೆ ವಿಧಾನಪರಿಷತ್ ಸದಸ್ಯನಾದೆ. ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದ ಸದಸ್ಯ ಸಭಾಪತಿ ಹುದ್ದೆ ಅಲಂಕರಿಸಿದ್ದು ಇದೇ ಮೊದಲು. ಈ ಅಭಿನಂದನೆಯನ್ನು ಶಿಕ್ಷಕರಿಗೆ ಅರ್ಪಣೆ ಮಾಡುತ್ತೇನೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಹನುಮಲಿ ಷಣ್ಮುಖಪ್ಪ, ಮುರುಘಾ ಮಠದ ಮಲ್ಲಿಕಾರ್ಜುನಸ್ವಾಮಿ, ಕೆ.ಇ.ಬಿ. ಷಣ್ಮುಖಪ್ಪ ಇದ್ದರು.